5)	-"- ಸದಲಗಾ	3,96,444
6)	-"- ಕೊನ್ನೂರು	3,667
7)	-"- ರಾಯಭಾಗ	2,93,925
8)	-"- ಕುಡುಚಿ	15,056

ಬಿಜಾಪುರ ಜಿಲ್ಲೆ

1)	-"- ಬಸವನ ಬಾಗೇವಾಡಿ	1,25,191
2)	-"- ಸಿಂದಗಿ	2,942
3)	-"- ಮುದ್ದೇಬಿಹಾಳ	17,24,438
4)	-"- ಗುಳೇದ ಗುಡ್ಡ	1,56,798
5)	-"- ಹುನಗುಂದ	5,66,284
6)	-"- ಕೆರೂರು	32, 982
7)	-"- ಇಳಕಲ್ಲು	16,547

ರಾಜ್ಯದಲ್ಲಿ ಕೊಳವೆ ಬಾವಿಗಳ ದುರಸ್ಥಿಗಾಗಿ ಪಂಚಾಯಿತಿಗಳಿಗೆ ಹಣ

2462 - ಶ್ರೀ ಪಾಟಾಳ್ ನಾಗರಾಜ್ (ರಾಮನಗರ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಕೊಳವೆಬಾವಿಗಳ ದುರಸ್ತಿಗೆ ಪ್ರತಿ ಗ್ರಾಮಪಂಚಾಯತಿಗಳಿಗೂ ವರ್ಷಕ್ಕೆ ಎಷ್ಟು ಹಣ ಒದಗಿಸಲಾಗುವುದು?

ಆ) ಕರ್ನಾಟಕ ರಾಜ್ಯಾದ್ಯಂತ ಕೆಟ್ಟಿರುವ ಕೊಳವೆ ಬಾವಿಗಳ ಸಂಖ್ಯೆ ಎಷ್ಟು?

ಇ) ಅವುಗಳನ್ನು ದುರಸ್ತಿ ಮಾಡಿಸಲು ಕೈಗೊಂಡ ಕ್ರಮಗಳೇನು?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :

ಅ) ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಪ್ರತಿ ಕೈಪಂಪಿನ ಕೊಳವೆ ಬಾವಿಯ ದುರಸ್ತಿಗೆ ವರ್ಷಕ್ಕೆ 400-00 ರೂಪಾಯಿಗಳನ್ನು ನಿಗದಿಪಡಿಸಿದ್ದು ಅದರಂತೆ ಹಣ ಒದಗಿಸಲಾಗುತ್ತಿದೆ.

ಆ) 9395

ಇ) ಕೊಳವೆ ಬಾವಿಗಳು ಕೆಟ್ಟು ಹೋದ ಬಗ್ಗೆ ದೂರುಗಳು ಬಂದ ಕೂಡಲೇ ತಾಲೂಕಿನಲ್ಲಿಯೂ ಕೊಳವೆಬಾವಿಗಳ ದುರಸ್ತಿಗೆ ಸಿಬ್ಬಂದಿ ವರ್ಗದಿಂದ ಕೂಡಿದ ಒಂದು ಸಂಚಾರಿ ಕಾರ್ಯಾಗಾರ ವ್ಯಾನ್ ಇದೆ.

ವಿದ್ಯುತ್ ಮಂಡಳಿಗೆ ಬರಬೇಕಾದ ಬಾಕಿ ಬಗ್ಗೆ ನ್ಯಾಯಾಲಯದಲ್ಲಿರುವ ಪ್ರಕರಣ ಕುರಿತು

2312 - ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ವಿದ್ಯುತ್ ಮಂಡಳಿಗೆ 1992-93, 1993-94 ಹಾಗೂ 1994-95 ಸಾಲಿನಲ್ಲಿ ಮತ್ತು 1995-96ನೇ ಸಾಲಿನಲ್ಲಿ (ಜುಲೈ 95ರ ಅಂತ್ಯದವರೆಗೆ) ವಿವಿಧ ಗ್ರಾಹಕರುಗಳಿಂದ ಬರಬೇಕಾಗಿರುವ ಒಟ್ಟು ಮೊತ್ತ ಎಷ್ಟು?

ಅ) ವಸೂಲಾದ ಮೊತ್ತ ಮತ್ತು ನಿವ್ವಳ ಬಾಕಿ ಇರುವ ಮೊತ್ತದ ವಿವರಣೆ ಪಟ್ಟಿಯನ್ನು ಹಾಗೂ ವಿದ್ಯುತ್ ಬಾಕಿ ಪೈಕಿ 1 ಲಕ್ಷ ರೂ.ಗಳಿಗಿಂತ ಹೆಚ್ಚು ಬಾಕಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಪೈಕಿ ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳೆಷ್ಟು (ಅತ್ಯಂತ ಹಳೆಯ ಪ್ರಕರಣಗಳ ವಿವರ ನೀಡುವುದು)

ಈ) ಈ ಸುಸ್ತಿದಾರರಿಂದ ಬಾಕಿ ಹಣದ ವಸೂಲಿ ಮಾಡಲು ಏನು ಕ್ರಮ ಕೈಗೊಳ್ಳಲಾಗಿದೆ.

ಉ) ಈ ಬಾಕಿ ವಸೂಲು ಮಾಡಲು ಕಂದಾಯ ಇಲಾಖೆಯಿಂದ (ಕರ್ನಾಟಕ ಗೃಹ ಮಂಡಳಿಯಲ್ಲಿ ವಸೂಲಿ ಅಧಿಕಾರಿಗಳು ಇರುವಂತೆ) ಕರ್ನಾಟಕ ಆಡಳಿತ ಸೇವೆ ಅಧಿಕಾರಿಗಳ ಸೇವೆ ಎರವಲು ಪಡೆದು ಪ್ರತಿ ಕಂದಾಯ ವಿಭಾಗಕ್ಕೆ ಒಬ್ಬರಂತೆ ವಸೂಲಿ ಅಧಿಕಾರಿಯೆಂದು ನೇಮಿಸಿ, ಈ ಬಾಕಿಯನ್ನು ಭೂ ಕಂದಾಯ ಬಾಕಿಯೆಂದು ವಸೂಲಿ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಜೆ.ಹೆಚ್. ಪಟೀಲ್ (ಉಪ ಮುಖ್ಯಮಂತ್ರಿಗಳು) :

ಅ) ವರ್ಷವಾರು ಬಾಕಿ ಮೊತ್ತದ ವಿವರಗಳು ಕೆಳಕಂಡಂತಿದೆ.

ವರ್ಷ	ಬಾಕಿ ಮೊತ್ತ ಲಕ್ಷ ರೂ.ಗಳಲ್ಲಿ
1992-93	1,75,190.28
1993-4	2,10,697.64
1994-95	2,35,888.61

1995-96ನೇ ಸಾಲಿನಲ್ಲಿ ಜುಲೈ 95ರ ಅಂತ್ಯದವರೆಗಿನ ಮಾಹಿತಿ ಈಗ ಲಭ್ಯವಿರುವುದಿಲ್ಲ.

ಏಪ್ರಿಲ್ 95ರ ಮಾಹೆಗೆ ಮಾಹಿತಿಯು ಲಭ್ಯವಿದ್ದು ಬಾಕಿಯ ಮೊತ್ತ 83,043.90 ಲಕ್ಷ ರೂ.ಗಳಾಗಿದೆ.

ಆ) ವರ್ಷವಾರು ವಿವರಗಳು ಕೆಳಕಂಡಂತಿದೆ.

ವರ್ಷ	ವಸೂಲಾದ ಮೊತ್ತ (ಲಕ್ಷ ರೂ.ಗಳಲ್ಲಿ)	ನಿವ್ವಳ ಬಾಕಿ ಮೊತ್ತ (ಲಕ್ಷ ರೂ.ಗಳಲ್ಲಿ
1992-93	1,14,420.33	60,769.95
1993-94	1,43,970.28	66,727.36
1994-95	1,67,319.31	68,569.30
1995-96 (ಏಪ್ರಿಲ್ 95ರವರೆಗೆ)	12,523.33	70,520.57

ಇ) 31-3-95ರ ಅಂತ್ಯದಲ್ಲಿದ್ದಂತೆ 317 ಇನ್ಸ್‌ಲೇಷನ್‌ಗಳ ಪ್ರಕರಣಗಳು ನ್ಯಾಯಾಲಯಗಳಲ್ಲಿ ಇತ್ಯರ್ಥವಾಗಬೇಕಾಗಿದೆ. ಅತ್ಯಂತ ಹಳೆಯ ಪ್ರಕರಣಗಳ ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ.

ಈ) ಬಾಕಿ ವಸೂಲಾತಿಯ ಬಗ್ಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ತೀವ್ರವಾಗಿ ಪರಿಗಣಿಸಿ, ಬಾಕಿ ವಸೂಲಾತಿಗಾಗಿ ಮಂಡಳಿಯ ಪ್ರತಿಯೊಂದು ವಿಭಾಗಕ್ಕೂ ಮಾಹೆಯಾನ ಗುರಿಯನ್ನು ನಿಗದಿ ಪಡಿಸಲಾಗುತ್ತಿದೆ ಹಾಗೂ ಈ ಗುರಿಯನ್ನು ಪೂರ್ಣ ಪ್ರಮಾಣದಲ್ಲಿ ಸಾಧಿಸಲು ಎಲ್ಲಾ ಪ್ರಯತ್ನಗಳನ್ನು ಮಾಡಲಾಗುತ್ತಿದೆ.

ಕೆಲವು ಗ್ರಾಹಕರುಗಳು ಬಾಕಿ ಹಣದ ಬಗ್ಗೆ ಮೇಲ್ಮನವಿ ಸಲ್ಲಿಸಿದ್ದು ಇವುಗಳನ್ನು ತ್ವರಿತಗತಿಯಲ್ಲಿ ವಿಲೇವಾ ಮಾಡಲು ಮಂಡಳಿಯ ಅಪ್‌ಲೆಟ್ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳ ಶೀಘ್ರ ಇತ್ಯರ್ಥಕ್ಕಾಗಿ ಸಾಧ್ಯವಾದ ಎಲ್ಲ ಪ್ರಯತ್ನಗಳನ್ನು ಮಾಡಲಾಗುತ್ತಿದೆ.

ಬಾಕಿ ಇರುವ ವಿದ್ಯುತ್ ಗ್ರಾಹಕರುಗಳಿಗೆ ವಿದ್ಯುತ್ ಸಂಪರ್ಕವನ್ನು ಬಂದ್ (ಡಿಸ್‌ಕನೆಕ್ಷನ್) ಮಾಡುವ ಕಾರ್ಯಗಳನ್ನು ಎಲ್ಲಾ ಹಂತಗಳಲ್ಲಿ ಪರಿಶೀಲಿಸಲಾಗುತ್ತಿದೆ.

ವಿದ್ಯುತ್ ಬಾಕಿಯನ್ನು ಭೂ ಕಂದಾಯ ಬಾಕಿ (ಲ್ಯಾಂಡ್ ರೆವಿನ್ಯೂ ಬಾಕಿ) ಯೆಂದು ಪರಿಗಣಿಸಿ, ಬಾಕಿ ವಸೂಲಾತಿಗಾಗಿ ಕೆಇಬಿ (ರಿಕವರಿ ಆಫ್ ಡ್ಯೂಸ್) ಆ್ಯಕ್ಟ್ 1976 ಮತ್ತು ಕೆಇಬಿ (ರಿಕವರಿ ಆಫ್ ಡ್ಯೂಸ್) ರೂಲ್ಸ್ 1978ರ ಪ್ರಕಾರ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಉ) ಇದನ್ನು ಪರಿಶೀಲಿಸಲಾಗುವುದು.

ವಿಧಾನ ಸಭಾ ಸದಸ್ಯರಾದ ಶ್ರೀ ಬಿ.ಎಸ್. ಯಡಿಯೂರಪ್ಪನವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 2312 ಕ್ಕೆ ಅನುಬಂಧ.

ನ್ಯಾಯ ದರದಲ್ಲಿ ಬಾಕಿ ಇರುವಅತ್ಯಂತ ಹಳೆಯ ಬಾಕಿ ಹಣದ ಮೊತ್ತ

ಕ್ರಮ ಸಂಖ್ಯೆ	ಆರ್.ಆರ್.ನಂ. ವಿವರಗಳು	ಹೆಸರು	ಪ್ರಕರಣಗಳ
1)	ವಿಎಆರ್-ಡಿ386	ಉದಯವಾಡ ಐಸ್ ಫ್ಯಾಕ್ಟರಿ	1.10
2)	ಎಚ್‌ಟಿ-5	ಕಾರೋನೆಟ್ ಇಂಜಿನಿಯರಿಂಗ್, ಮಲೆಪ್	1.65
3)	ಎಕ್‌ಎಲ್‌ಎಚ್‌ಟಿ-23	ಇಂಟರ್ ಮಾಡಲ್ ಟ್ರಾನ್ಸ್‌ಪೋರ್ಟ್	2.04
4)	ಎಚ್‌ಟಿ-5	ಸೂರಜ್ ಟ್ರೇಡಿಂಗ್	1.13
5)	ಎನ್‌ಪಿ-172	ಅಮೀರ್‌ಜಾನ್ ಜನತಾ ಮಿನರಲ್	1.37
6)	ಎಎನ್‌ಪಿ-36	ಕೆ.ಎನ್. ತಿಪ್ಪೇಸ್ವಾಮಿ	1.13
7)	ಎಇಎಚ್-103	ಎಸ್.ಬಿ. ಅಂಜನೇಯಶೆಟ್ಟಿ, ಮಧುಗಿರಿ	1.47
8)	ಪಿ-1146	ಎಸ್.ಎಂ.ಎಸ್. ಟ್ರಸ್ಟ್	2.38